ಅ) 1983-84ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಎಷ್ಟು ಜನತಾ ಗೃಹ ಗಳನ್ನು ನಿರ್ಮಿಸಲಾಗಿದೆ ;

ಆ) ಅದರಲ್ಲಿ ಹರಿಜನ ಗಿರಿಜನ ಮತ್ತು ಇತರ ಹಿಂದುಳಿದವರಿಗೆ ನೀಡಿದ ಗೃಹಗಳ ಸಂಖ್ಯೆ ಎಷ್ಟು?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಮಾನ್ಯ ರಾಜ್ಯ ವಸತಿ ಮಂತ್ರಿಗಳು).—

ಅ) 257 ಮನೆಗಳು.

ಆ) 115 ಮನೆಗಳನ್ನು ಹರಿಜನ ಗಿರಿಜನರಿಗೆ ಮಂಜೂರು ಮಾಡಲಾಗಿದೆ. ಉಳಿದ ಮನೆಗಳನ್ನು ಇತರ ಹಿಂದುಳಿದ ವರ್ಗದವರಿಗೆ ಮಂಜೂರು ಮಾಡಲಾಗಿದೆ.

ಶ್ರೀ ಬಿ. ಹೆಚ್. ಯಂಕಾನಾಯ್ಕ.—ಹರಿಜನ ಗಿರಿಜನರಿಗೆ ಮಂಜೂರು ಮಾಡಿರುವ ಮನೆಗಳಲ್ಲಿ ಕಳೆದ ಮೂರು ತಿಂಗಳಲ್ಲಿ ಎಷ್ಟು ಮನೆಗಳು ಬಿದ್ದಿವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸರಿಯಾಗಿ ಕೇಳಿಸುತ್ತಿಲ್ಲ.

ಶ್ರೀ ಯು. ಭೂಪತಿ.—ನೀವು ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ಎಷ್ಟು ಮನೆಗಳು ಬಿದ್ದಿವೆ ಎಷ್ಟು ಮನೆಗಳು ಸರಿಯಾಗಿವೆ, ಸರಿಯಾಗಿರುವ ಮನೆಗಳ ಲೆಕ್ಕ ಮಾತ್ರ ಕೊಟ್ಟಿದ್ದೀರಾ ಎಂದು ಕೇಳುತ್ತಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಬಿದ್ದು ಹೋಗಿರುವು ದನ್ನು ನನ್ನ ಗಮನಕ್ಕೆ ತಂದರೆ ರಿಪೇರಿ ಮಾಡಿಸಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಹೆಚ್. ಯಂಕಾನಾಯ್ಕ.—ಮೂರು ತಿಂಗಳಲ್ಲಿ ಎಷ್ಟು ಮನೆಗಳು ಬಿದ್ದು ಹೋಗಿವೆ ; ನಾಶವಾಗಿವೆ ? ಇದಕ್ಕೆ ಕಾರಣರಾದ ಸಂಬಂಧಪಟ್ಟ ಅಧಿಕಾರಿಗಳಾದ ಜೆ.ಇ. ಯಾಗಲಿ, ಅಥವಾ ಇತರ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರು ಹೇಳಿರುವುದನ್ನು ವಿಚಾರಿಸುತ್ತೇನೆ ಸ್ವಾಮಿ.

ವಿಷಯ : ನಾರಾಯಣ ಪೈ ವೇತನ ಆಯೋಗ ಹಾಗೂ ಸರಾಸರಿ ವೇತನ ಆಯೋಗ

ಪ್ರ. ಸಂಖ್ಯೆ 59 (123) **ಶ್ರೀ ಕೆ. ವಸಂತ ಬಂಗೇರ** (ಬೆಳ್ತಂಗಡಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯಶ್ರೀ ಸಾರಿಗೆ ಮತ್ತು ವಸತಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ನಾರಾಯಣ ಪೈ, ಪೇ ಕಮೀಷನ್ ಮತ್ತು 1976ರ ಅಫಿಷಿಯಲ್ ಕಮಿಟಿ ವರದಿಯನ್ನು ಜಾರಿಗೆ ತರದೇ ಇರಲು ಕಾರಣಗಳೇನು ಹಾಗೂ ಸದರಿ ವರದಿಯ ಮೇರೆಗೆ 1976ರಲ್ಲಿ ಕಾನೂನು ಪದ ವೀಧರರಾಗಿದ್ದು ವಕೀಲ ವೃತ್ತಿಯಲ್ಲಿದ್ದವರನ್ನು ಮೋಟಾರು ವಾಹನ ಇಲಾಖೆಯಲ್ಲಿ ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್‌ರಾಗಿ ನೇಮಿಸಿ ಅವರನ್ನು ಸಾರಿಗೆ ಅಧಿಕಾರಿಯವರ (ಆರ್‌ಟಿಓ) ಸಂಬಳ ಮತ್ತು ಗ್ರೇಡ್ ನಲ್ಲಿ ಇರಬೇಕೆಂದು ಹೇಳಿದ್ದರೂ ಅಂತಹ ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್‌ರವರನ್ನು ಮೋಟಾರು ವಾಹನ ಇನ್‌ಸ್ಪೆಕ್ಟರ್‌ರವರ ಗ್ರೇಡಿನಲ್ಲಿ ಇಡಲು ಕಾರಣಗಳೇನು;

ಆ) ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್‌ರವರನ್ನು ಮೋಟಾರು ವಾಹನ ಇನ್‌ಸ್ಪೆಕ್ಟರ್ ಗ್ರೇಡ್‌ನಲ್ಲಿ ಇಟ್ಟದ್ದು ಸದರಿ ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್‌ರವರಿಗೆ ಸಾರಿಗೆ ಅಧಿಕಾರಿ ಹುದ್ದೆಗೆ ಇರುವ ಮೂಲ ವಿದ್ಯಾರ್ಹತೆಗಿಂತ ಹೆಚ್ಚಿದ್ದರು ಕೂಡ ಅವರಿಗೆ ಸಾರಿಗೆ ಅಧಿಕಾರಿ ಹುದ್ದೆಗೆ ಮುಂಬಡ್ತಿಯಾಗಲು ನಾಲ್ಕು ಹಂತಗಳೇಕೆ, ಮತ್ತು ಮೋಟಾರು ವಾಹನ ಇನ್‌ಸ್ಪೆಕ್ಟರ್‌ರವರಿಗೆ ಸಾರಿಗೆ ಅಧಿಕಾರಿಯಾಗುವ ಮೂಲ ವಿದ್ಯಾರ್ಹತೆ ಇಲ್ಲದಿದ್ದರೂ ಅವರಿಗೆ ಮುಂಬಡ್ತಿಯಾಗಲು ಎರಡೇ ಹಂತಗಳೇಕೆ;

ಇ) ಈ ಅವ್ಯವಸ್ಥೆಯನ್ನು ಸರ್ಕಾರದವರು ಇನ್ನಾದರೂ ಸರಿಪಡಿಸುವರೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—(ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು)—

ಅ) ಮೋಟಾರು ವಾಹನ ಇಲಾಖೆಯಲ್ಲಿರುವ ಪ್ರಾಸಿಕ್ಯೂಟಿಂಗ್ ತನಿಖಾಧಿಕಾರಿಗಳ ಕಾರ್ಯವನ್ನು ಪರಿಶೀಲಿಸಿದ ನಾರಾಯಣ ಪೈ ಆಯೋಗವು ಮತ್ತು ಅಧಿಕೃತ ವೇತನ ಆಯೋಗವು ಕಾನೂನು ಪದವಿ ಯನ್ನು ಹೊಂದಿರುವ ಪ್ರಾಸಿಕ್ಯೂಟಿಂಗ್ ತನಿಖಾಧಿಕಾರಿಗಳನ್ನು ಪ್ರಾಸಿಕ್ಯೂಟಿಂಗ್ ನಿರ್ದೇಶನಾಲಯಕ್ಕೆ ವರ್ಗಾವಣೆ ಮಾಡಲು ಮತ್ತು ಕೆಲವರನ್ನು ಇಲಾಖೆಯಲ್ಲೇ ಉಳಿಸಿಕೊಳ್ಳಲು ಸಲಹೆ ನೀಡಿದೆ ಹಾಗೂ ಪ್ರಾಸಿಕ್ಯೂಷನ್ ನಿರ್ದೇಶನಾಲಯದಿಂದ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳನ್ನು ನಿಯೋಜಿಸಿ

ಕೊಳ್ಳಲು ಸಹ ಸೂಚಿಸಿದೆ. ಕಾನೂನು ಪದವೀಧರರಾಗಿದ್ದು ವಕೀಲ ವೃತ್ತಿಯಲ್ಲಿದ್ದವರನ್ನು ಮೋಟಾರು ವಾಹನ ಇಲಾಖೆಯಲ್ಲಿ ಪ್ರಾಸಿಕ್ಯೂಟಿಂಗ್ ತನಿಖಾಧಿಕಾರಿಗಳಾಗಿ ನೇಮಿಸಿ ಅವರನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಯವರ ಸಂಬಳ ಮತ್ತು ಶ್ರೇಣಿಯಲ್ಲಿ ಇಡಬೇಕೆಂದು ಆಯೋಗವು ಸಲಹೆ ನೀಡಿಲ್ಲ. ಅಧಿಕೃತ ವೇತನ ಆಯೋಗವು ಪ್ರಾಸಿಕ್ಯೂಟಿಂಗ್ ತನಿಖಾಧಿಕಾರಿ ಮತ್ತು ಮೋಟಾರು ವಾಹನ ತನಿಖಾಧಿಕಾರಿಗಳ ಕೆಲಸ ನಿರ್ವಹಣೆ ಹಾಗೂ ಜವಾಬ್ದಾರಿಯನ್ನು ಗಮನದಲ್ಲಿಟ್ಟುಕೊಂಡು ಎರಡು ಹುದ್ದೆಗಳಿಗೂ ಸಂಬಳ ಶ್ರೇಣಿಯನ್ನು ನಿಗದಿ ಪಡಿಸಿದೆ.

ಅ) ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್‌ರವರ ಮತ್ತು ಮೋಟಾರು ವಾಹನ ತನಿಖಾಧಿಕಾರಿಯವರ ಮುಂಬಡ್ತಿ ಹೀಗಿದೆ :—

1) ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್–ಅಧೀಕ್ಷಕ ಟ್ರಿಕ್ಸ್ : ಪ್ರಾದೇಶಿಕ ಸಾರಿಗೆ ಅಧಿಕಾರಿಯವರ ಮುಖ್ಯ ಠಾಣಾ ಸಹಾಯಕ ಅಧಿಕಾರಿ–ಉಪ ಸಾರಿಗೆ ಅಧಿಕಾರಿ–ಪ್ರಾದೇಶಿಕ ಸಾರಿಗೆ ಅಧಿಕಾರಿ,

2) ಮೋಟಾರು ವಾಹನ ತನಿಖಾಧಿಕಾರಿ-ಹಿರಿಯ ಮೋಟಾರು ವಾಹನಗಳ ತನಿಖಾಧಿಕಾರಿ–ಉಪ ಸಾರಿಗೆ ಅಧಿಕಾರಿ ಪ್ರಾದೇಶಿಕ ಸಾರಿಗೆ ಅಧಿಕಾರಿ.

ಈ ಮೇಲೆ ತಿಳಿಸಿದ ಕ್ರಮ ಮೋಟಾರು ವಾಹನಗಳ ಇಲಾಖೆ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಸರಿಯಾಗಿದೆ ; ಮತ್ತೆ ಮೋಟಾರು ವಾಹನಗಳ ತನಿಖಾಧಿಕಾರಿಗಳ ಮತ್ತು ಪ್ರಾಸಿಕ್ಯೂಟಿಂಗ್ ತನಿಖಾಧಿಕಾರಿಗಳ ಕಾರ್ಯಸ್ವರೂಪ ಬೇರೆ ಬೇರೆಯಾಗಿದ್ದು ಅವೆರಡನ್ನು ಹೋಲಿಸುವುದು ಸರಿಯಲ್ಲ. ಮೊದಲನೆ ನೇಮಕ ಬೇರೆ ಬೇರೆಯಾಗಿದ್ದು, ಕ್ರಮವಾಗಿ ಮೇಲೆ ತಿಳಿಸಿದ ನಿಯಮಗಳಾನುಸಾರ ಮುಂಬಡ್ತಿ ನೀಡಲಾಗುತ್ತಿದೆ ಮತ್ತು ಈ ಕ್ರಮ ಸರಿಯಾಗಿದೆ.

ಇ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಅಧ್ಯಕ್ಷರೆ, ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್ ಹಾಗೂ ಮೋಟಾರು ವಾಹನ ಇನ್‌ಸ್ಪೆಕ್ಟರ್ ಇವರ ವಿದ್ಯಾರ್ಹತೆ ಏನು ? ಪ್ರಾಮುಖ್ಯವಾಗಿ ಮೋಟಾರು ವಾಹನ ಇನ್‌ಸ್ಪೆಕ್ಟರ್ ಸಾರಿಗೆ ಅಧಿಕಾರಿಯಾಗಲು ಮುಂಬಡ್ತಿಗೆ 2 ಹಂತ ಇದೆ. ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರಿಗೆ ಸಾರಿಗೆ ಅಧಿಕಾರಿಯಾಗಲು 4 ಹಂತ ಇದೆ. ಈ ರೀತಿಯ ತಾರತಮ್ಯ ಏಕೆ ? ಅಲ್ಲದೆ ಈ ವಿಚಾರದಲ್ಲಿ ಮಾನ್ಯ ಸಚಿವರಿಗೆ ಸಂಬಂಧಪಟ್ಟ ಅಧಿಕಾರಿಗಳು ತಪ್ಪು ಮಾಹಿತಿಯನ್ನು ನೀಡಿದ್ದಾರೆ. ಆದ್ದರಿಂದ ಈ ವಿಚಾರದಲ್ಲಿ ಪುನಃ ವಿಚಾರ ಮಾಡಿ ಇರುವ ತಾರತಮ್ಯವನ್ನು ಹೋಗಲಾಡಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರಿಗೂ ಮತ್ತು ಮೋಟಾರು ವಾಹನ ಇನ್‌ಸ್ಪೆಕ್ಟರಿಗೂ ತಾರಮ್ಯ ಏನಿಲ್ಲ ಎಂದು ನಾನು ಸ್ಪಷ್ಟಪಡಿಸಿದ್ದೇನೆ. ಆದರೆ ಮಾನ್ಯ ಸದಸ್ಯರು ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಈ ಪ್ರಶ್ನೆ ಬಂದ ಮೇಲೆ ನಾನು ಸವಿಸ್ತಾರವಾಗಿ ನೋಡಿದ್ದೇನೆ. ಆ ರೀತಿಯ ತಾರತಮ್ಯ ಕಂಡುಬಂದಿಲ್ಲ : ತಪ್ಪು ಮಾಡಿದ್ದಾರೆ ಎಂದು ಕಂಡುಬಂದಿಲ್ಲ ಮಾನ್ಯ ಸದಸ್ಯರು ಸ್ಪೆಸಿಫಿಕ್ಕಾಗಿ ಹೇಳಿದರೆ ಅವರನ್ನು ಪ್ರಮೋಷನ್ ಮಾಡಲಿಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ : ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಹಾಗೂ ಉಕ್ಕಿನ ಕಾರ್ಖಾನೆ

ಪ್ರ. ಸಂಖ್ಯೆ 60(101) ಶ್ರೀ ಜಿ. ರಾಜುಗೌಡ (ಹನೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಭಾರೀ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳಿಂದ ದಯೆಯಿಟ್ಟು ಉತ್ತರಿಸುವರೆ ?

ಅ) ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಭಾರತೀಯ ಉಕ್ಕು ಪ್ರಾಧಿಕಾರದ ವಶಕ್ಕೆ ಒಪ್ಪಿಸಲು ಸರ್ಕಾರ ಯೋಚಿಸುತ್ತಿದೆಯೇ ಅಥವಾ ಖಾಸಗಿಯವರ ವಶಕ್ಕೆ ಒಪ್ಪಿಸಲು ನಿರ್ಧರಿಸಲಾಗಿದೆಯೇ ;

ಆ) ಈ ಕಾರ್ಖಾನೆಯು ಇಂತಹ ದುಸ್ಥಿತಿಗೆ ಬರಲು ಮುಖ್ಯ ಕಾರಣವೇನು ?

ಶ್ರೀ ಜೆ. ಹೆಚ್. ಪಟೇಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು) —

ಅ) ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಭಾರತೀಯ ಉಕ್ಕು ಪ್ರಾಧಿಕಾರಕ್ಕೆ ವಹಿಸಿ ಕೊಡಲು ರಾಜ್ಯ ಸರ್ಕಾರ ಕೇಂದ್ರ ಸರ್ಕಾರದೊಡನೆ ವ್ಯವಹರಿಸುತ್ತಾ ಇದೆ.